Sri S. R. KANTHI.—Government is sympathetic to the proposal provided funds are available.

ಶ್ರೀ ಹಂಜಿ ಶಿವಣ್ಣ.—(ಅ) ಪ್ರಶ್ನೆಗೆ ಉತ್ತರವಾಗಿ 'ಗೊತ್ತಿದೆ' ಎಂದು ಹೇಳಿದ್ದೀರಿ ಯಾವ ಸ್ಥಳದಲ್ಲಿ ಕೊರ್ಟು ಕಟ್ಟಬೇಕೆಂದು ನಿಗದಿ ಮಾಡಿದ್ದೀರಿ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಎಸ್. ಆರ್. ಕಂಠಿ.—ಅವರು ಸ್ವಲ್ಪತಪ್ಪು ತಿಳಿದುಕೊಂಡ ಹಾಗೆ ಕಾಣುತ್ತದೆ ಸಹಾನು ಭೂತಿ ಪೂರ್ವಕವಾಗಿ ಅದನ್ನು ಯೋಚನೆ ಮಾಡುತ್ತಾ ಇದ್ದೇವೆ ಎಂದು ಪ್ರಶ್ನೆಗೆ ಉತ್ತರಕೊಟ್ಟಿದ್ದೇನೆ. ಈಗ ಏನಾಗಿದೆ ಎಂದರೆ, ತರೀಕೆರೆಯಲ್ಲಿ ಟೆಂಪೊರೆರಿ ಅಡೀಷನಲ್ ಮುನ್ಸೀಫ್ ಮ್ಯಾಜಿಸ್ಟ್ರೇಟ್ ಕೋರ್ಟಿದೆ, ಅದನ್ನು ಇಲ್ಲಿಗೆ ಷಿಫ್ಟ್ ಮಾಡಬೇಕೇ ಎಂಬ ಪ್ರಶ್ನೆ ಇದೆ. ಅದನ್ನು ಸರ್ಕಾರ ಯಾವ ರೀತಿ ಸಹಾನು ಭೂತಿಯಿಂದ ಪರಿಶೀಲನೆ ಮಾಡಬೇಕೋ ಆ ರೀತಿ ಅದನ್ನು ಮಾಡುತ್ತಾರೆ ಎಂದು ಹೇಳಿದ್ದೇನೆ.

ಶ್ರೀ ಎಸ್. ಎಚ್. ತಮ್ಮಯ್ಯ —ಕೋರ್ಟನ್ನು ಎಲ್ಲಿ ಕಟ್ಟಬೇಕೆಂಬ ಸ್ಥಳ ನಿಗದಿ ಮಾಡಿದ್ದೀರಾ?

ಶ್ರೀ ಎಸ್. ಆರ್. ಕಂಠಿ.—ಇಲ್ಲಿ ಕೋರ್ಟು ಕೊಡಬೇಕೆಂಬ ಪ್ರಶ್ನೆ ಇದೆ, ಕಟ್ಟಡ ಕಟ್ಟಬೇಕೆಂಬ ಪ್ರಶ್ನೆ ಇಲ್ಲ, ಮಾನ್ಯ ಸದಸ್ಯರಾದ ಮಲ್ಲಪ್ಪನವರು ಕಡೂರಿನಲ್ಲಿ ಇದರ ಅವಶ್ಯಕತೆ ಇದೆ ಕೊಡುತ್ತೀರಾ ಎಂದು ಕೇಳಿದ್ದಾರೆ, ಸಹಾನುಭೂತಿ ಇದೆ ಅಂತ ಹೇಳಿದ್ದೇನೆ.

ಶ್ರೀ ಕೆ. ಎಂ. ತಮ್ಮಯ್ಯ.— ಇಲ್ಲಿಗೆ ಎರಡು-ಮೂರು ವರ್ಷಗಳಿಂದಲೂ ಸಹಾನು ಭೂತಿಯಿಂದ ಪರಿಶೀಲನೆ ಮಾಡುತ್ತಿದ್ದೇವೆಂದು ಹೇಳುತ್ತಲೇ ಇದ್ದೀರಿ. ಅಲ್ಲಿಗೆ ಅದು ಯಾವಾಗ ಬರುತ್ತದೆ ?

ಶ್ರೀ ಎಸ್. ಆರ್. ಕಂಠಿ.—ಇದು ಅವರಿಗೂ ಗೊತ್ತಿದೆ. ನನಗೂ ಗೊತ್ತಿದೆ. ಇದನ್ನು ಮುಂದಿನ ವರ್ಷ ಮಾಡೋಣ ಅನ್ನುವ ವಿಶ್ವಾಸ ನನಗಿದೆ.

ಶ್ರೀ ಕೆ. ಎನ್. ವೀರಪ್ಪಗೌಡ.—ತೀರ್ಥಹಳ್ಳಿಗೆ ಕೋರ್ಟನ್ನು ಕೊಡತಕ್ಕ ವಿಚಾರವೇನಾದರೂ ಪರಿಶೀಲನೆಯಲ್ಲಿದೆಯೇ ?

ಶ್ರೀ ಎಸ್. ಆರ್. ಕಂಠಿ.—ಅದಕ್ಕೆ ಬೇರೆ ಪ್ರಶ್ನೆ ಕೇಳಿದರೆ ಉತ್ತರ ಒದಗಿಸಲಾಗುವುದು.

Sri M. RAMAPPA.—What are the guide lines for the establishment of new law courts ? Is the Government guided by the recommendations of the Committee in this behalf ?

Sri S. R. KANTHI.—So far as the establishment of new courts is concerned, the High Court advises the Government to establish the Courts, and the High Court does it taking into consideration many factors.

Sri M. RAMAPPA.—I want to know whether the Government is following the recommendations of any of the Committee appointed in this behalf ?

Sri S. R. KANTHI.—I have already said that if Mallappa's Committee recommendations have to be followed, it is for the High Court to advise.

Building for Bar Association at Sagar

129. Sri K. H. SRINIVASA (Sagar). —

Will the Minister for Law and Parliamentary Affairs be pleased to state :—

(*a*) whether there have been any representations regarding the construction of a Bar Association Building, Witness Room, etc., in respect of the existing Courts at Sagar ;

(*b*) if so, where the matter stands at present ?

A.—Sri S. R. KANTHI (Minister for Law and Parliamentary Affairs).—

(*a*) There are no representations to Government. The High Court has a proposal under consideration in this regard.

(*b*) Plans and Estimates are under preparation.

ಶ್ರೀ ಕೆ. ಎಚ್. ಶ್ರೀನಿವಾಸ.—ಇಲ್ಲಿ (ಬಿ) ಪ್ರಶ್ನೆಗೆ ಇಂಗ್ಲೀಷಿನಲ್ಲಿ ಪರಿಶೀಲನೆಯಲ್ಲಿದೆ ಎಂದು ಉತ್ತರ ಕೊಟ್ಟು ಕನ್ನಡದಲ್ಲಿ ಕೊಟ್ಟಿರತಕ್ಕ ಪ್ರಶ್ನೋತ್ತರಗಳಲ್ಲಿ (ಬಿ)ಗೆ ಉತ್ತರವಿಲ್ಲ. ಈ ಎರಡರಲ್ಲಿ ಯಾವುದು ಸರಿ ?

† ಶ್ರೀ ಎಸ್. ಆರ್. ಕಂಠಿ.—ಇಂಗ್ಲೀಷಿನಲ್ಲಿರುವ ಉತ್ತರ ಸರಿ ಎಂದು ಹೇಳುತ್ತೇನೆ.

ಶ್ರೀ ಕೆ. ಎಚ್. ಶ್ರೀನಿವಾಸ.—ಅಲ್ಲಿ ಪ್ಲಾನ್ ಮತ್ತು ಎಸ್ಟಿಮೇಟುಗಳು ತಯಾರಾಗಿ ಬಹಳ ದಿನಗಳಾಯಿತು. ಆದಾಗ್ಯೂ ತಾವಿಲ್ಲಿ ಇನ್ನೂ under consideration ಎಂದು ಹೇಳಿರುವುದರಿಂದ ಮತ್ತೆ ಹೊಸದಾಗಿ ಪ್ಲಾನ್ ಮತ್ತು ಎಸ್ಟಿಮೇಟುಗಳನು, ತಯಾರಿಸಲಾಗಿದೆಯೇ ?

ಶ್ರೀ ಎಸ್. ಆರ್. ಕಂಠಿ.—ಇಲ್ಲಿಯವರೆಗೂ ಅವು ಸರ್ಕಾರದವರ ಕಡೆ ಬಂದಿರಲಿಲ್ಲ. ಈಗ ತಾನೇ ಬಂದಿವೆ ಅದನ್ನು ವಿಚಾರ ಮಾಡುತ್ತಿದ್ದೇವೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಮಾನ್ಯ ಸಚಿವರು ಕನ್ನಡದಲ್ಲಿರತಕ್ಕ ಉತ್ತರ ತಪ್ಪೆಂದೂ ಇಂಗ್ಲೀಷಿನಲ್ಲಿರತಕ್ಕ ಉತ್ತರ ಸರಿಯೆಂದೂ ಹೇಳಿದ್ದಾರೆ. ಆದ್ದರಿಂದ ಕನ್ನಡದಲ್ಲಿ ಬರತಕ್ಕ ಉತ್ತರಗಳೆಲ್ಲಾ ತಪ್ಪೆಂದು ತಿಳಿದುಕೊಳ್ಳೋಣವೇ ?

ಶ್ರೀ ಎಸ್. ಆರ್. ಕಂಠಿ.—ಕನ್ನಡದ ಪ್ರತಿಯಲ್ಲಿ ಉತ್ತರ ಅಚ್ಚಾಗಿಲ್ಲ, ಅಷ್ಟೆ.

ಶ್ರೀ ಕೆ. ಎಚ್. ಶ್ರೀನಿವಾಸ್.—ಇದನ್ನು ಲಾ ಇರಾಖೆಯಿಂದ ಬೇರೆ ಎಗ್ಸಾಮಿನೇಷನ್ ಮಾಡಿಸಬೇಕೇ ?

ಶ್ರೀ. ಎಸ್. ಆರ್. ಕಂಠಿ.—ಅದನ್ನು ಅಲ್ಲಿಂದ ಬಂದ ನಂತರ ಹಣಕಾಸಿನ ಇರಾಖೆ ಪರಿಶೀಲನೆ ಮಾಡಬೇಕು. ಅದನ್ನು ಸಹಾನುಭೂತಿಯಿಂದ ಮಾಡಿಸೋಣ.

ಶ್ರೀ ಎಂ. ಬಸವರಾಜು.—ಕೋರ್ಟುಗಳ ಬಲ್ಲ ಸಾಕ್ಷಿಗಾರರಿಗೆ ಇರುವುದಕ್ಕೆ ಪೆಲ್ವರ್ಸ್ ಇಳಿ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ, ಬಂದಿದ್ದರೆ ಅವು ಎಲ್ಲಿ ಸಾಲದು ಅನ್ನುವುದನ್ನು ತಿಳಿಸುತ್ತೀರಾ ?

ಶ್ರೀ ಎಸ್. ಆರ್. ಕಂಠಿ.—ಬೇರೆ ಪ್ರಶ್ನೆ ಕಳುಹಿಸಿ, ಅದಕ್ಕೆ ಉತ್ತರವನ್ನು ಒದಗಿಸಲಾಗುವುದು.

Writ Petitons arising out of Labour Laws

131. Sri M. S. KRISHNAN (Malleswaram).—

Will the Minister for Labour, Animal Husbandry, Fisheries and Sericulture be pleased to state :—

(*a*) the number of cases of writ petitions, etc., arising out of Labour Laws filed in the High Court of Mysore during each one of the past 3 years ;

(*b*) the number of cases disposed off during each of these years;

(*c*) the number of cases pendig disposal—

(i) for more than six months,

(ii) for more than one year,

(iii) for more than two years ?